# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)

**ಗ್ರಾಮೀಣಾಭಿವೃದ್ಧಿ ಭವನ, 4& 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು–09.**

ಸಂಖ್ಯೆ:ಕೆಆರ್‌ಐಡಿಎಲ್:ಇಎಸ್‌ಟಿ:ಸಅ–ಗ್ರೇಡ್–1:ಸಿಆರ್–40:2013–14 ದಿನಾಂಕ: 27/11/2017

## ಅ ಧಿ ಸೂ ಚ ನೆ

ವಿಷಯ: ದಿನಾಂಕ: 01/05/75 ರಿಂದ 01/04/17ರ ಅವಧಿಯ ವರೆಗೆ ಕಛೇರಿ ಅಧೀಕ್ಷಕರ ವೃಂದಕ್ಕೆ ಸೇರ್ಪಡೆ ಹೊಂದಿದ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಚುರಪಡಿಸಿರುವ ಕುರಿತು.

ಉಲ್ಲೇಖ: ಬಿ.ಕೆ. ಪವಿತ್ರ ಇತ್ಯಾದಿ ಹಾಗೂ ಯುನಿಯರ್ ಆಫ್ ಇಂಡಿಯಾ ಮತ್ತು ಇತ್ಯಾದಿ ಸಿವಿಲ್ ಅಪೀಲುಗಳಿಗೆ ಸಂಬಂಧಿಸಿದಂತೆ ಘನ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 09/02/2017 ರಂದು ನೀಡಿರುವ ತೀರ್ಪಿನ ಆದೇಶ.

2. ಕರ್ನಾಟಕ ಸರ್ಕಾರದ ಆದೇಶ ಸಂ:ಡಿಪಿಎಆರ್/182/2011 ದಿನಾಂಕ: 06–05–2017.

*****

ಘನ ಸರ್ವೋಚ್ಚ ನ್ಯಾಯಲಯವು ಸಿವಿಲ್ ಮೇಲ್ಮನವಿ ಸಂ: 2368/2011 ರಲ್ಲಿ ಶ್ರೀಮತಿ ಬಿ.ಕೆ ಪವಿತ್ರ ಮತ್ತು ಇತರರು ಸಲ್ಲಿಸಿದ ದಾವೆಯಲ್ಲಿ "ಕರ್ನಾಟಕ ಸರ್ಕಾರದ ನೌಕರರ ಜೇಷ್ಠತಾ ಮೀಸಲಾತಿ ಕಾಯ್ದೆ 2002ರ ಸೆಕ್ಷನ್ 3 ಮತ್ತು 4 ರ ಪ್ರಕಾರ ಬಡ್ತಿಯನ್ನು ನೀಡಿರುವ ಬಗ್ಗೆ ಪ್ರಶ್ನಿಸಿದ್ದು, ಸದರಿ ದಾವೆಯ ಮೀಸಲಾತಿಯ ಸಂವಿಧಾನ ಆರ್ಟಿಕಲ್ 14 ಮತ್ತು 16ರ ಪ್ರಕಾರ (Ultra vires) ಆಗಿದೆಯೆಂದು ಘನ ಸರ್ವೋಚ್ಚ ನ್ಯಾಯಲಯವು ದಿ: 09/02/2017 ರಂದು ನೀಡಿರುವ ತೀರ್ಪಿನಲ್ಲಿ ತಿಳಿಸಿದ್ದು, ಅದರಲ್ಲಿಯ ಪ್ಯಾರಾ 27 ರ ಉದ್ಧೃತ ಭಾಗವನ್ನು ಈ ಕೆಳಕಂಡಂತೆ ಪುನರುಚ್ಛಿಸಲಾಗಿದೆ.

**"In view of the above, we allow these appeals, set aside the impugned judgment and declare the provisions of the impugned Act to the extent of doing away with the 'catch up' rule and providing for consequential seniority under Section 3 and 4 to be ultra vires articles 14 and 16 of the Constitution. This judgment will not effect those who have already retried and will not affect financial benefits already taken. Consequential promotions granted to serving employees, based on consequential seniority benefit, will be treated as adhoc and liable to be reviewed. Seniority list may be now revised in the list of the judgment within three months from today. Further consequential action may be taken accordingly within three months".**

ಘನ ಸರ್ವೋಚ್ಚ ನ್ಯಾಯಲಯದ ದಿನಾಂಕ: 09/02/2017ರ ತೀರ್ಪಿನ ಆಧಾರದ ಮೇಲೆ ಕರ್ನಾಟಕ ರಾಜ್ಯ ಸರ್ಕಾರದ ಆದೇಶ ದಿನಾಂಕ: 06/05/2007 ರಲ್ಲಿ ಎಲ್ಲಾ ವರ್ಗದ ಪರಿಷ್ಕೃತ ಜೇಷ್ಠತಾ ಪಟ್ಟಿಗಳನ್ನು ಹಾಗೂ ಪ್ರಸ್ತುತ ಮೀಸಲಾತಿ ಹಾಗೂ ಮುಂಬಡ್ತಿಯನ್ನು ಪರಿಷ್ಕರಿಸಲು ಆದೇಶಿಸಿ, ಮಾರ್ಗಸೂಚಿಯನ್ನು ನೀಡಿ ಅದರಂತೆ ಕ್ರಮ ವಹಿಸಲು ತಿಳಿಸಲಾಗಿದೆ.

ಅದರಂತೆ ಘನ ಸರ್ವೋಚ್ಚ ನ್ಯಾಯಾಲಯದ ತೀರ್ಪು ದಿನಾಂಕ: 09/02/2017ರಲ್ಲಿ ನೀಡಿರುವ ನಿರ್ದೇಶನ ಹಾಗೂ ಸರ್ಕಾರ ಆದೇಶ ದಿನಾಂಕ: 06/05/2017 ರಂದು ಕರ್ನಾಟಕ ಸರ್ಕಾರದ ಡಿಪಿಎಆರ್ ಇಲಾಖೆಯು ಹೊರಡಿಸಿರುವ ಮಾರ್ಗಸೂಚಿಯ ಆದೇಶವನ್ನು ಆಧಾರವಾಗಿಟ್ಟುಕೊಂಡು ನ್ಯಾಯಾಲಯ ಆದೇಶವನ್ನು ಪಾಲಿಸುವ ನಿಟ್ಟಿನಲ್ಲಿ ಈ ಸಂಸ್ಥೆಯ ಕಛೇರಿ ಅಧೀಕ್ಷಕರ ವೃಂದದ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲಾಗಿದೆ.

ದಿನಾಂಕ: 01/05/75 ರಿಂದ 01/04/17ರ ಅವಧಿಯ ವರೆಗೆ ಕಛೇರಿ ಅಧೀಕ್ಷಕರ ವೃಂದಕ್ಕೆ ಸೇರ್ಪಡೆ ಹೊಂದಿ, ಮುಂಬಡ್ತಿ ಹಾಗೂ ಮೀಸಲಾತಿ ನೀಡಿರುವ ಬಗ್ಗೆ ಮೇಲ್ದರ್ಜೆ ಹಾಗೂ ಕೆಳದರ್ಜೆಯ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ಪರಿಷ್ಕೃತ ತಾತ್ಕಾಲಿಕ ಪಟ್ಟಿಯನ್ನು ಈ ಅಧಿಸೂಚನೆಗೆ ಲಗತ್ತಿಸಿ, ಪ್ರಚುರಪಡಿಸಲಾಗಿದೆ.

ಸದರಿ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿ ಬಗ್ಗೆ ಆಕ್ಷೇಪಣೆಗಳೇನ್ನಾದರೂ ಇದ್ದಲ್ಲಿ ಈ ಅಧಿಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 30 ದಿನದೊಳಗೆ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿಪಡಿಸಿರುವ ಕಾಲಾವಧಿಯು ಮೀರಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.

ಸದರಿ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಂಸ್ಥೆಯ ಅಧಿಕೃತ ವೆಬ್‌ಸೈಟ್ **www.kridl.org** ರಲ್ಲಿ ಪ್ರಚುರ ಪಡಿಸಲಾಗಿದ್ದು ಅಧಿಕಾರಿ/ಸಿಬ್ಬಂದಿಗಳು ಸದರಿ ವೆಬ್‌ಸೈಟ್ ನಿಂದ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪಡೆದುಕೊಳ್ಳಲು ಸೂಚಿಸಿದೆ.

ವ್ಯವಸ್ಥಾಪಕ ನಿರ್ದೇಶಕರು 27/11/2017
ಕೆಆರ್‌ಐಡಿಎಲ್, ಬೆಂಗಳೂರು

ಗೆ,
ಸಂಬಂಧಪಟ್ಟವರಿಗೆ

27/11/17
DESPATCHED

ಪ್ರತಿಯನ್ನು:

1. ಪ್ರಧಾನ ವ್ಯವಸ್ಥಾಪಕರು (ಕೇಂದ್ರೀಯ/ಉತ್ತರ/ದಕ್ಷಿಣ/ಹಣಕಾಸು) ಕೆಆರ್‌ಐಡಿಎಲ್, ಕೇಂದ್ರ ಕಛೇರಿ.

3. ಸೂಚನಾ ಫಲಕಕ್ಕೆ.